ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 945
ಸದಸ್ಯರ ಹೆಸರು : ಶ್ರೀ. ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 12.03.2020
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಅ) ಬೀದರ್ ಜಿಲ್ಲೆಗೆ 22.7 ಟಿ.ಎಂ.ಸಿ. ನೀರನ್ನು ಬಜಾವತ್ ಆಯೋಗದಿಂದ ಅವಾರ್ಡ ಮಾಡಲಾಗಿದ್ದು, ಆ ನೀರನ್ನು ತಡೆಹಿಡಿಯಲು ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ? ರೂಪಿಸಿದ್ದಲ್ಲಿ ಅವುಗಳು ಯಾವುವು? ಇಲ್ಲದಿದ್ದಲ್ಲಿ ಕಾರಣವೇನು?

ಗೋದಾವರಿ ಕಣಿವೆಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ 22.37 ಟಿ.ಎಂ.ಸಿ. ನೀರನ್ನು ಬಳಸಲು ಪರಿಷ್ಕರಿಸಿದ ಯೋಜನಾವಾರು ಹಂಚಿಕೆಯನ್ನು ಕೆಳಗೆ ನೀಡಲಾಗಿದೆ.

| ಕ್ರ. ಸಂ. | ಪ್ರಾಜೆಕ್ಟಗಳ ವಿವರ | ವಾಸ್ತವಿಕವಾಗಿ ಆಗುವ ನೀರಿನ ಬಳಕೆ (ಟಿ.ಎಂ.ಸಿ) |
|---|---|---|
| 1 | ಕಾರಂಜಾ ಪ್ರಾಜೆಕ್ಟ್ | 9.27 |
| 2 | ಚುಳಕಿನಾಲಾ ಪ್ರಾಜೆಕ್ಟ್ | 1.17 |
| 3 | ಮಾಂಜ್ರಾ ಏತ ನೀರಾವರಿ ಯೋಜನೆ | 4.80 |
| 4 | ಕರ್ನಾಟಕ ಭಾಗದ ನಿಜಾಮ್ ಸಾಗರ ಕೆಳಗಿನ ಭಾಗದ ಡ್ರೈನ್ ನೀರು | 0.67 |
| 5 | ಈಗಿರುವ ಸಣ್ಣ ನೀರಾವರಿ ಪ್ರಾಜೆಕ್ಟ್‌ಗೆ | 2.95 |
| | **ಒಟ್ಟು** | **18.86** |

ಮಾಂಜ್ರಾ ಏತ ನೀರಾವರಿ ಬದಲಾಗಿ ಸರಣಿ ಬ್ಯಾರೇಜುಗಳನ್ನು ನಿರ್ಮಿಸಿ ಒಟ್ಟು 4.80 ಟಿ.ಎಂ.ಸಿ. ನೀರಿನ ಸಂಗ್ರಹಿಸುವ ಯೋಜನೆಯನ್ನು ಕೈಗೊಳ್ಳಲಾಗಿದೆ. ನೀರಿನ ಹಂಚಿಕೆಯ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ. | ಬ್ಯಾರೇಜುಗಳು | ನೀರಿನ ಬಳಕೆ (ಟಿ.ಎಂ.ಸಿ) | ಷರಾ |
|---|---|---|---|
| 1 | ಜೀರಗಿಹಾಳ್ | 0.78 | ಸದರಿ ಬ್ಯಾರೇಜುಗಳು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ. |
| 2 | ಮಾಣಿಕೇಶ್ವರ | 0.78 | |
| 3 | ಹಾಲಹಳ್ಳಿ | 2.46 | |
| 4 | ಚಂದಾಪುರ | 0.78 | |
| | **ಒಟ್ಟು** | **4.80** | |

ಈ ಕೆಳಗಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

| ಕ್ರ. ಸಂ. | ಯೋಜನೆಗಳು | ಷರಾ |
|---|---|---|
| 1 | ಕೊಂಗಳಿ ಬ್ಯಾರೇಜಿನಿಂದ ನೀರನ್ನು ಎತ್ತಿ ಬಸವಕಲ್ಯಾಣ ತಾಲ್ಲೂಕಿನ 15 ಕೆರೆಗಳು ಮತ್ತು ಚುಳಕಿನಾಲಾ ಜಲಾಶಯ ತುಂಬಿಸುವ ಯೋಜನೆ. | 0.768 ಟಿಎಂಸಿ (ಕಾಮಗಾರಿ ಪ್ರಗತಿಯಲ್ಲಿದೆ). |
| 2 | ಬೀದರ ಜಿಲ್ಲೆಯ ಕಾರಂಜಾ ಯೋಜನೆ ಅಡಿಯಲ್ಲಿ ಮಾಂಜ್ರಾ ನದಿಗೆ ಅಡ್ಡಲಾಗಿ ಚಂದಾಪುರ ಗ್ರಾಮದ ಹತ್ತಿರ ನಿರ್ಮಿಸಿರುವ ಬ್ಯಾರೇಜಿನಿಂದ 33 ಕೆರೆಗಳಿಗೆ ನೀರು ತುಂಬಿಸುವ ಯೋಜನೆ. | 0.88 ಟಿಎಂಸಿ (ವಿಸ್ತೃತ ಯೋಜನಾ ವರದಿ ತಯಾರಿಕಾ ಹಂತದಲ್ಲಿದೆ) |

ಸಂಖ್ಯೆ:ಜಸಂಇ 30 ಎಂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು